ತುಮಕೂರು ಡಿಸ್ಟ್ರಿಕ್ಟ್.

ನೋಟಿಫಿಕೇಷ೯.

1896ನೇ ಇಸವಿ ಮೇ ಮಾಹೆ 24ನೇ ತಾರೀಖು.

ಮೈಸೂರು ದೇಶದ ಫಾರೆಸ್ಟ್ಸ್ ಇಲಾಖಾ ಕ೯ಸರ್‌ವೇಟರ್ ಸಾಹೆಬರವರ 1896ನೇ ಇಸವಿ ಮೇ ಮಾಹೆ 16ನೇ ತಾರೀಖಿನ 3845—153ನೇ ನಂಬರ್ ಡಾಕಿಟ್ ಅನುಸರಿಸಿ ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ,—ಮದ್ದಗಿರಿ ತಾಲ್ಲೂಕಿನಲ್ಲಿರುವ ಈ ಕೆಳಗೆ ನಮೂದು ಆಗಿರುವ ಡಿಸ್ಟ್ರಿಕ್ಟ್ ಜಂಗಲ್‌ಗಳು ಇನ್ನೊಂದು ಹುಕುಂ ಕೊಡುವ ಪರಿಯಂತ್ರ ಸಾದೆ, ಮರ ಮುಟ್ಟು ಮುಂತಾದ ಸಾಮಾನುಗಳನ್ನ ಇವುಗಳಲ್ಲಿ ಯಾರೊಬ್ಬರೂ ಕಡಿಯದಂತೆ ಬಂದು ಮಾಡಲ್ಪಟ್ಟಿವೆ.

ಡಿಸ್ಟ್ರಿಕ್ಟ್ ಜಂಗಲ್ ಇರುವ ಹೋಬ್ಳಿ ಹೆಸರು.	ಡಿಸ್ಟ್ರಿಕ್ಟ್ ಜಂಗಲ್ ಹೆಸರು.
ಮದ್ದಗಿರಿ.	(1) ಕಟ್ಟಹಳ್ಳಿ
	(2) ಸಿಗ್ಗಬೆಟ್ಟ
	(3) ಕನಗೊಂಡಬೆಟ್ಟ
	(4) ಹೊಸಹಳ್ಳಿ
	(5) ತಾಯಿಗೊಂಡನಹಳ್ಳಿ
	(6) ಗುರ್ರಮ್ಮನಹಳ್ಳಿ
	(7) ಚಿನಕವಜ್ಜ

ಎಂ. ವೆಂಕಟನಾರಣಪ್ಪ,
ಡಿ|| ಫಾರೆಸ್ಟ್ ಆಫಿಸರ್.

ತಾರೀಖು 2ನೇ ಜೂ೯ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—

ಸ೯ 1896—97ನೇ ಸಾಲಿಗೆ ಅಂದರೆ ಸ೯ 1896ನೇ ಇಸವಿ ಜುಲೈ 1ನೇ ತಾರೀಖು ಲಾಗಾಯತು ಸ೯ 1897ನೇ ಇಸವಿ ಜೂ೯ 30ನೇ ತಾರೀಖು ವರಿಗೆ ಬಾಜೂದಲ್ಲಿ ಕಂಡ ಗುಬ್ಬೀ ತಾಲ್ಲೂಕು ಗ್ರಾಮಗಳಲ್ಲಿರುವ ಡಿಸ್ಟ್ರಿಕ್ಟ್ ಫಾರೆಸ್ಟ್‌ಗಳಲ್ಲಿಯೂ ಹಿಡುವಳಿಯಲ್ಲಿ ಇಲ್ಲದ ಅಕಾರ ಕಂಡ ಸರಕಾರಿ ಬಂಜರು ಜಮೀನುಗಳಲ್ಲಿಯೂ ಮತ್ತು ಬಾಜೂದಲ್ಲಿ ಕಂಡ ಅವ್ಯತಮಹಲ್ ಕಾವಲುಗಳಲ್ಲಿಯೂ ದೊರಿಯುವ ಈ ಕೆಳಗೆ ನಮೂದು ಮಾಡಲ್ಪಟ್ಟ ಪಸಾರೆ ಜಿನಸುಗಳನ್ನ ಜವಾಯಿಸಿಕೊಳ್ಳುವ ಹಕ್ಕುದಾರಿಯನ್ನ ಅಮಲ್‌ದಾರ್ರವರ ರೂಬರೂ 1896ನೇ ಇಸವಿ ಜುಲೈ ತಾರೀಖು 8ರಲ್ಲು ಗುಬ್ಬೀ ತಾಲ್ಲೂಕು ಕಛೇರಿಯಲ್ಲಿ ಹರಾಜ್ ಮಾಡಲ್ಪಡುತ್ತೆ. ಹರಾಜು ಮಧ್ಯಾನ್ನ 12 ಘಂಟೆಗೆ ಷುರೂ ಆಗುತ್ತೆ. ಈ ಹರಾಜು ತುಮಕೂರು ಡಿಸ್ಟ್ರಿಕ್ಟ್ ಡೆಪ್ಯೂಟಿ ಕಮ್ಮಿಷನರ್‌ರವರ ಮಂಜೂರಾತಿಗೆ ವಳಪಟ್ಟಿರುತ್ತೆ.

(1) ಹಾಗಲವಾಡಿ ಸಮ್ಮತು ಹರಳಕೆರೆ ನಾಯಕನಕೆರೆ ವಗ್ಯೆರೆ
(2) ಹಾಗಲವಾಡಿ ಸಮ್ಮತು ಮಂಜಲಧೊರೆಫಿರ್ಕಾ ಗ್ರಾಮಗಳು
(3) ಚಿಟ್ಟನಹಳ್ಳಿ ಸಮ್ಮತು ಹರಳಕೆರೆ ವಗ್ಯೆರೆ ಗ್ರಾಮಗಳು
(4) ನಿಟ್ಟೂರು ಸಮ್ಮತು ಕೊಂಡ್ಲಿ ಫಿರಕಾ ಕರಡಿಕಲ್ಲು ವಗ್ಯೆರೆ ಗ್ರಾಮಗಳು
(5) ಜೇಳೂರು ಸಮ್ಮತು ಹುವ್ವಿನ ಕಟ್ಟನಲ್ಲಿರುವ ವಗ್ಯೆರೆ ಗ್ರಾಮಗಳು

ಅವ್ಯತಮಹಲ್ ಕಾವಲುಗಳು.

(1) ಗುಬ್ಬೀ ಸಮ್ಮತು ಬಿಕ್ಕೆಗುಡ್ಡದ ಕಾವಲು
(2) ಡಿಟೋ ಬಸ್ತಿಕಟ್ಟೆ ಕಾವಲು
(3) ಡಿಟೋ ಗುಬ್ಬೀ ಅಮಾನೀಕೆರೆ ವಳಗೆರೆ ಕಾವಲು
(4) ಡಿಟೋ ಚಿಟ್ಟನಹಳ್ಳಿ ಸಮ್ಮತು ನಾಗೇಗವ್ವಡನಬ್ಯಾಲ ಕೆಂಜಿಗವ್ವಡನ ಬ್ಯಾಲ
(5) ಡಿಟೋ ಹಿಂಡಿಸಿಗೆರೆ ಕಾವಲು
(6) ಡಿಟೋ ಚಿಟ್ಟನಹಳ್ಳಿ ವಳಗೆರೆ ಕಾವಲು
(7) ಡಿಟೋ ಕಾಡಾಲದ ಗಿಡದ ಕಾವಲು
(8) ಡಿಟೋ ಇಡಗೂರುಕೆರೆ ಹಿಂದಣ ಕಗ್ಗಲಿ ಕಾವಲು
(9) ಹಾಗಲವಾಡಿ ಸಮ್ಮತು ಯರೆ ಕಾವಲು
(10) ಕಲ್ಲೂರು ಮಾಗಣಿ ಬಸವನಾಗರದ ಕಾವಲು
(11) ಡಿಟೋ ಕಲ್ಲೂರುಕೆರೆ ಹಿಂದಣ ಜಾಲಿ ಕಾವಲು
(12) ನಿಟ್ಟೂರು ಮಾಗಣಿ ಬಿದರಹಳ್ಳಿ ಕಾವಲು
(13) ಡಿಟೋ ಈಚಲು ಕಾವಲು
(14) ದಂಡಿನಶಿವರದ ಮಾಗಣಿ ನಾರಿಗೆಹಳ್ಳಿಕೆರೆ ಕಾವಲು
(15) ಕಡಬ ಮಾಗಣಿ ಕಡಬ ವಳಗೆರೆ ಕಾವಲು
(16) ಜೇಳೂರು ಮಾಗಣಿ

(1) ಅಳಲೇಕಾಯಿ	(4) ಕಪಿಲಾರಂಗು	(7) ಗೇರುಬೀಜ
(2) ತಾರೇಕಾಯಿ	(5) ಪತಂಗ	(8) ಆವರಿಕೆ ಗೋಂದು
(3) ದಿಂಡಗದಗೋಂದು	(6) ಹೊಂಗೇಬೀಜ	(9) ಬ್ಯಾಲದಹಣ್ಣು ಮುಂತಾದ್ದು

2. ಚಡದರಖಾಸ್ತುದಾರನು ಹರಾಜು ಖೈದಾದ ಕೂಡ್ಲೆ ಹರಾಜು ಮೊಬಲಗು ಪೈಕಿ ಕೇಕಡಾ 25 ರೂಪಾಯಿನಂತೆ ಆಗುವ ಮೊಬಲಗನ್ನ ತೇವಣಿ ಕಟ್ಟುತಕ್ಕದ್ದು. ಬಾಕಿ ಮೊಬಲಗು ಹರಾಜು ಮಂಜೂರ್ಮಾಡಲ್ಪಟ್ಟು ಸಂಗತಿ ಅಮಲ್‌ದಾರ್ರಿಂದ ಚಡಸವಾಲ್‌ದಾರ್ರಿಗೆ ತಿಳಿಸಲ್ಪಟ್ಟು ತಾರೀಖು ಮೊದಲು 15 ದಿವಸಗಳ ವಳಗಾಗಿ ಪಾವತಿ ಮಾಡತಕ್ಕದ್ದು. ಪೂರಾ ಹರಾಜು ಮೊಬಲಗಿಗೆ ರೂಪಾಯಿ ಒಂದಕ್ಕೆ 1 ಆಣೆಯಂತೆ ಲೋಕಲ್‌ಸೆಸ್ ವಸೂಲ್ಮಾಡಲ್ಪಡುವದು.

3. ಕ್ಲಿಪ್ತ ಕಾಲದವಳಗೇ ಹಣ ಪಾವತಿ ಮಾಡದೆ ತಪ್ಪಿದರೆ ದರಖಾಸ್ತುದಾರರು ಕೇವಣಾತಿ ಇಟ್ಟ ಮೊಬಲಗು ಸರಕಾರಕ್ಕೆ ಕೇರಿಸಿಕೊಳ್ಳಲ್ಪಡುವದಲ್ಲದೆ ಹರಾಜಿನಲ್ಲಿ ಪಡದ ಹಕ್ಕನ್ನ ಅವ್ವಲ್ ದರಖಾಸ್ತುದಾರನ ಲುಕ್ಸಾನಿಗೆ ವಳಪಡಿಸಿ ಪುನಹ ಹರಾಜು ಮಾಡಲ್ಪಡುವದು. ಆದರೆ ದುಸರೇ ಹರಾಜಿನಲ್ಲಿ ವುಂಟಾಗುವ ಘಾಯಿದೆ ಭಾಗ ದರಖಾಸ್ತುದಾರರು ಹೊಂದಲು ಅರ್ಹರಾಗುವದಿಲ್ಲ.

4. ಇಜಾರೆದಾರನು ಹಿಡುವಳಿ ಜಮೀನುಗಳಲ್ಲಿರತಕ್ಕ ಮರಗಳ ಮತ್ತು ಸ್ವಂತ ಅಮರಾಯಿಗಳಲ್ಲಿ ಬೆಳೆಯುವ ಫಸಲನ್ನ ರೂಢಿಸಕೂಡದು.

5. ಗ್ರಾಮ ಅಮರಾಯಿ ಫಲ ಹುಟ್ಟುವಳಿಗಳು ಮೇಲ್ಕಂಡ ಪಸಾರೆ ಜಿನಸಿಗಳಲ್ಲಿ ಅಡಗಿರುವದಿಲ್ಲ.

ಪಿ. ವೆಂಕಟರಾವ್,
ಫಾರ್ ಆ|| ಜೆಪ್ಯುಟಿ ಕಮ್ಮಿಷನರ್.

ಮೈಸೂರ್ ಜೈಲ್.

ಇಸ್ತಿಹಾರ್‌ನಾಮಾ.

ತಾರೀಖು 1ನೇ ಜೂನ್ ಸ|| 1896ನೇ ಇಸವಿ.

ಸ|| 1896ನೇ ಇಸವಿ ಜುಲ್ಯೈ 1ರ ಲಾಗಾಯತು ಸ|| 1897ನೇ ಇಸವಿ ಜೂನ್ 30ರ ವರಗೆ, ಆ ಎರಡು ದಿವಸಗಳೂ ಸೇರಿ, ಮೈಸೂರು ಜೈಲಿನ ಖೈದಿಗಳ ಉಪಯೋಗಕ್ಕಾಗಿ ಈ ಕೆಳಗೆ ನಮೂದಿಸುವ ಸರಕುಗಳನ್ನು ಸರಬರಾಯಿ ಮಾಡಲು ಕಂಟ್ರಾಕ್ಟು ತೆಗದುಕೊಳ್ಳುವುದಕ್ಕಾಗಿ ದರಖಾಸ್ತುಗಳನ್ನು ಕವರಿನಲ್ಲಿ ಹಾಕಿ ಮೊಹರು ಮಾಡಿ ಕೊಡತಕ್ಕದ್ದೆಂತಲೂ, ಸ|| 1896ನೇ ಇಸವಿ ಜೂನ್ 22ನೇ ಸೋಮವಾರ ಹಗಲು 10 ಘಂಟೆಯವರಿಗೆ ಮೈಸೂರು ಜೈಲ್ ಸೂಪರ್‌ಟೆಂಡೆಂಟರು ಅಂಥಾ ದರಖಾಸ್ತುಗಳನ್ನು ತೆಗದುಕೊಳ್ಳುವರೆಂತಲೂ ಇದರಿಂದ ಘಾಯಿಷ್ ಮಾಡಿಸಿ.

2. ಮೇಲೆಕಂಡ ತಾರೀಖಾದ ತರುವಾಯ ಯಾವ ದರಖಾಸ್ತುಗಳನ್ನೂ ಹಿಡಿಯುವದಿಲ್ಲ.

3. ದರಖಾಸ್ತಿನ ಕವರಿನ ಮೇಲ್‌ಭಾಗದಲ್ಲಿ ಬರೆದಿರಬೇಕಾದ ವೇಲ್ಲಿಳಾಸವೇನೆಂದರೆ,

"I. ಧಾನ್ಯದ ಸರಬರಾಯಿ ದರಖಾಸ್ತು"
"II. ಕಾರದ ಸಾಮಾನು ಸರಬರಾಯಿ ದರಖಾಸ್ತು"
"III. ಇತರ ಬೇಕಾದ ಸಾಮಾನುಗಳ ಸರಬರಾಯಿ ದರಖಾಸ್ತು"
"IV. ಕುರೀ ಮಾಂಸದ ಸರಬರಾಯಿ ದರಖಾಸ್ತು"

4. ಧಾನ್ಯದ ಸರಬರಾಯಿಗೆ 200 ರೂಪಾಯಿ, ಕಾರದ ಸಾಮಾನಿನ ಸರಬರಾಯಿಗೆ 100 ರೂಪಾಯಿ, ಇತರ ಬೇಕಾದ ಸಾಮಾನುಗಳ ಸರಬರಾಯಿಗೆ 100 ರೂಪಾಯಿ, ಕುರೀ ಮಾಂಸದ ಸರಬರಾಯಿಗೆ 75 ರೂಪಾಯಿ, ಈ ಮೇರೆ ನಗದಾಗಿಯಾಗಲಿ ಸರ್ಕಾರೀ ನೋಟಿನ ಮೂಲಕವಾಗಿಯಾಗಲಿ ಶೇವಣಾತಿಯನ್ನು ದರಖಾಸ್ತಿನ ಸಂಗಡ ಹಾಜರ್ಮಾಡಿದ ಹೊರತು, ದರಖಾಸ್ತುಗಳನ್ನು ಹಿಡಿಯುವುದಿಲ್ಲ.

5. ಮೈಸೂರು ಜೈಲ್ ಸೂಪರ್‌ಟೆಂಡೆಂಟರವರು ಮೇಲೆ ನಮೂದಾದ ತಾರೀಖು ಮತ್ತು ಹೊತ್ತಿನಲ್ಲಿ ಹಾಜರಾಗುವದಕ್ಕೆ ಇಷ್ಟವುಳ್ಳಂಥಾ ದರಖಾಸ್ತುದಾರರ ರೂಬರೂ ಸದರೀ ದರಖಾಸ್ತುಗಳನ್ನು ತಮ್ಮ ಆಫಿಸಿನಲ್ಲಿ ಒಡೆಯುವರು.

6. ಈ ಕೆಳಗೆ ನಮೂದಿಸುವ ಪದಾರ್ಥಗಳನ್ನು ಹಿಂದು ರೂಪಾಯಿಗೆ ಇಷ್ಟು ಪೌಂಡು ತೂಕದ ಮೇರೆ ಸರಬರಾಯಿ ಮಾಡಲಾಧೀತೆಂದು ಎಲ್ಲಾ ದರಖಾಸ್ತುಗಳಲ್ಲಿಯೂ ದರಪು ನಮೂದಾಗಿರತಕ್ಕದ್ದು. ಮತ್ತು ಸರಬರಾಯಿ ಮಾಡತಕ್ಕ ಪದಾರ್ಥಗಳೆಲ್ಲಾ ಒಳ್ಳೇದಾಗಿಯೂ ಇರತಕ್ಕದ್ದು.

ಸಂವತ್ಸರಕ್ಕೆ ಬೇಕಾದ ಪದಾರ್ಥಗಳ ಪಟ್ಟಿ.

	ಬೇಕಾಗುವ ಪದಾರ್ಥದ ಪರಿಮಾಣ.			
ನಂಬರ್ I ಧಾನ್ಯ.	ಅಕ್ಕಿ	..	24,550	ಪೌಂಡುಗಳು,
	ರಾಗಿ	..	95,000	,,
	ತೊಗರಿಬ್ಯಾಳೆ	..	13,000	,,
	ಅವರೇಬ್ಯಾಳೆ	..	10,000	,,
ನಂಬರ್ II ಕಾರದ ಸಾಮಾನು.	ಮೆಣಸಿನಪುಡಿ	..	1,800	,,
	ಈರುಳ್ಳಿ	..	2,400	,,
	ಬೆಳ್ಳುಳ್ಳಿ	..	300	,,
	ಹುಣಸೇಹಣ್ಣು	..	2,400	,,
	ಉಪ್ಪು	..	3,500	,,
ನಂಬರ್ III ಇತರ ಬೇಕಾದ ಸಾಮಾನು.	ಬೊಸರು	..	10,400	,,
	ಬೆಳ್ಳೆಣ್ಣೆ	..	1,150	,,
	ತುಪ್ಪ	..	600	,,
	ತರಕಾರಿ	..	28,500	,,
	ಸವುದೆ	..	136,960	,,
	ಹಾಲು	..	800	,,
	ಸಕ್ಕರೆ	..	50	,,
	ಸೋಜಿ	..	30	,,
	ರೊಟ್ಟಿ	..	20	,,
ನಂಬರ್ IV ಕುರೀ ಮಾಂಸ.	ಕುರೀ ಮೊಂಸ	..	7,400	,,